

‘ಸರಿಸೆ ಸರಿಸೆ ನಿನ್ನ ಸೆರಗ ಸರಿಸೆ’ ಹಾಡಿನ ದೃಶ್ಯ



ಬಾಲಿವುಡ್ ನಟ ಸಂಜಯ್ ದತ್

ಮೂರು ವರ್ಷಗಳಾಗಿತ್ತು, ನೋರಾ ಫತೇಹಿ ಕನ್ನಡದ ಒಂದು ಐಟಂ ಹಾಡಿಗೆ ನೃತ್ಯ ಪೂರೈಸಿ. ಆ ಹಾಡಿನ ಸಾಹಿತ್ಯ ಹಾಗೂ ಸಣ್ಣದೊಂದು ನೃತ್ಯದ ಝಲಕ್ ಒಳಗೊಂಡ ವಿಡಿಯೊ ಯುಗಾದಿ ಹಬ್ಬಕ್ಕೆ ಕೆಲವೇ ದಿನಗಳ ಮೊದಲಷ್ಟೆ ಬಿಡುಗಡೆಯಾಯಿತು. ‘ಸರಿಸೆ ಸರಿಸೆ ನಿನ್ನ ಸೆರಗ ಸರಿಸೆ’ ಎಂಬ ಶೀರ್ಷಿಕೆಯ ಗೀತೆಯನ್ನು ಕೇಳಿದ ಅನೇಕರು ಅದು ಕರ್ಣಕಠೋರ ಎಂದು ಸಾಮಾಜಿಕ ಮಾಧ್ಯಮದಲ್ಲಿ ಬರೆಯತೊಡಗಿದರು. ಶೃಂಗಾರ, ಪೋಲಿತನವನ್ನು ದಾಟಿದ ಶೈಲಿ ಇದು ಎಂದು ತರಾಟೆಗೆ ತೆಗೆದುಕೊಂಡರು.

‘ಕೆ.ಡಿ–ದಿ ಡೆವಿಲ್’ ಕನ್ನಡ ಸಿನಿಮಾದ ಈ ಗೀತೆಯನ್ನು ಬರೆದವರು ಅದರ ನಿರ್ದೇಶಕರೂ ಆದ ಪ್ರೇಮ್. ಈ ಹಾಡನ್ನು ಅವರು ಕನ್ನಡವಷ್ಟೇ ಅಲ್ಲದೆ ತೆಲುಗು, ತಮಿಳು, ಮಲಯಾಳ, ಹಿಂದಿ ಭಾಷೆಗಳಿಗೂ ತರ್ಜುಮೆ ಮಾಡಿಸಿ ಬಿಡುಗಡೆ ಮಾಡಿದರು. ಹಿಂದಿಯಲ್ಲಿ ಆ ಸಾಹಿತ್ಯ ಕೇಳಿದವರು ಇನ್ನಷ್ಟು ಕೆರಳಿದರು. ಮಹಾರಾಷ್ಟ್ರದ ವಕೀಲರೊಬ್ಬರು ಆ ಹಾಡನ್ನು ಯೂಟ್ಯೂಬ್‌ನಿಂದ ತೆಗೆದುಹಾಕುವಂತೆ ತಾಕೀತು ಮಾಡಬೇಕೆಂದು ಸೆನ್ಸಾರ್ ಮಂಡಳಿಗೆ ದೂರು ಕೊಟ್ಟರು. ಅದಾದ ಕೆಲವೇ ಗಂಟೆಗಳಲ್ಲಿ ಹಿಂದಿಯಲ್ಲಿ ವಿಡಿಯೊ ಕಿತ್ತುಹಾಕಿದರು. ಆದರೆ, ಉಳಿದ ಭಾಷೆಗಳಲ್ಲಿ ವಿಡಿಯೊ ತಕ್ಷಣಕ್ಕೆ ತೆಗೆದುಹಾಕಲಿಲ್ಲ. ರಾಷ್ಟ್ರೀಯ ಮಹಿಳಾ ಆಯೋಗವು ಹಾಡಿನಲ್ಲಿ ನೃತ್ಯ ಮಾಡಿರುವ ನಟ ಸಂಜಯ್ ದತ್ ಹಾಗೂ ನೋರಾ ಇಬ್ಬರಿಗೂ ಪ್ರತಿಕ್ರಿಯೆ ಕೇಳಿ, ನೋಟಿಸ್ ನೀಡಿದೆ. ಕರ್ನಾಟಕದಲ್ಲಿ ಮಹಿಳಾ ಆಯೋಗ ಕೂಡ ಇಂತಹ ಅಶ್ಲೀಲ ಹಾಡನ್ನು ಕಿತ್ತುಹಾಕಬೇಕು ಎಂದು ಕಠಿಣವಾಗಿ ಹೇಳಿತು. ಆನಂದ್ ಆಡಿಯೊ ಕಂಪನಿ ತನ್ನ ಅಧಿಕೃತ ಯೂಟ್ಯೂಬ್ ಖಾತೆಯಿಂದ ಹಾಡನ್ನು ಕಿತ್ತುಹಾಕಿತು ಎನ್ನುವುದು ನಿಜ. ಆದರೆ, ಇಷ್ಟು ಹೊತ್ತಿಗೆ ಅಸಂಖ್ಯ ಯೂಟ್ಯೂಬ್